**ದಿನಾಂಕ:10-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದಃ-**

ನಾನು ಈ ಹಿಂದೆ ಸಾಕ್ಷಿ ನುಡಿಯುವ ಸಮಯದಲ್ಲಿ ನಿಪಿ -79 ಮತ್ತು 80 ರಲ್ಲಿ ತೋರಿಸಿದ ಪ್ರಕರಣಗಳು ಚಾಲ್ತಿಯಲ್ಲಿರುವುದು ಗೊತ್ತಿತ್ತು ಎಂದರೆ ಸರಿ. **ಆ ಎರಡೂ** ದಾವೆಗಳಲ್ಲಿನ ತೀರ್ಪು ಈ ದಾವೆಯ ತೀರ್ಪಿಗೆ ಅನುಗುಣವಾಗಿ ಬಂಧನಕಾರಿಯಾಗಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ-79 ಮತ್ತು 80 ರಲ್ಲಿ ತೋರಿಸಿದ ಪ್ರಕರಣಗಳ ತೀರ್ಪಿನಲ್ಲಿ ಸಿದ್ದರಾಯಿ, ಯಲ್ಲಪ್ಪ ಮತ್ತು ಭೀಮಸೇನ ರವರ ಹೆಸರನ್ನು ಬೇಕಾಯಿದೆ ಶಿರ ನಲ್ಲಿ ನಮೂದಿಸಲಾಗಿದೆ ಎಂದು ಬರೆದಿಲ್ಲ, ಪ್ರಸ್ತುತ ದಾವೆಯ ತೀರ್ಪು ಇಬ್ಬರೂ ಪಕ್ಷಗಾರರಿಗೆ ಬಂಧನಕಾರಿಯಾಗಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**